ಕರ್ನಾಟಕ ಸರಕಾರ

# COMMISSIONERATE

**Directorate of Health & Family Welfare Services**

5th Floor, Arogya Soudha, Magadi Road, Bangalore-23

ಸಂ: ಡಿಡಿ/ಎಸ್ ಎಸ್ ಯು/ನೊವಲ್ ಕೊರೊನ ವೈರಸ್/17/2020-21 (ಪಾರ್ಟ್ ಫೈಲ್) ದಿನಾಂಕ: 24-12-2020

## ಸುತ್ತೋಲೆ

ವಿಷಯ: ಕೋವಿಡ್-19 ಸೋಂಕಿತ ವಿದ್ಯಾರ್ಥಿಗಳಿಗೆ ಮತ್ತೆ ತರಗತಿಗಳಿಗೆ ಸೇರಲು ಅವಕಾಶ ನೀಡುವ ಬಗ್ಗೆ

ಉಲ್ಲೇಖ:
1. G.O. No: ED 334 UNE 2020 Bengaluru Dtd: 09-11-2020
2. TAC-COVID19 ನ 55ನೇ ಸಭೆ ದಿನಾಂಕ 14-12-2020 ರ ನಡಾವಳಿ; ಅಜೆಂಡಾ-4 ರ ನಿರ್ಣಯದಂತೆ

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೋಧಕರು, ವಿದ್ಯಾರ್ಥಿಗಳು ಹಾಗೂ ಇತರೆ ಸಿಬ್ಬಂದಿಗಳು ಕಡ್ಡಾಯವಾಗಿ 3 ದಿನಗಳ ಮುಂಚೆ ಕೋವಿಡ್-19 (RT-PCR) ಪರೀಕ್ಷೆಯನ್ನು ಮಾಡಿಸಿಕೊಂಡು test report Negative ಇದ್ದಲ್ಲಿ ಮಾತ್ರ ವಿಶ್ವವಿದ್ಯಾಲಯ/ಕಾಲೇಜುಗಳಿಗೆ ಹಾಜರಾಗುವಮತೆ ಸೂಚಿಸಲಾಗಿತ್ತು.

ಕರ್ನಾಟಕ ಸರ್ಕಾರದ ಪರಿಷ್ಕೃತ ಡಿಸ್ಚಾರ್ಜ್ ನೀತಿ ದಿ: 11-08-2020 ರಂತೆ ರೋಗಲಕ್ಷಣರಹಿತ ಕೋವಿಡ್ ಸೋಂಕಿತರಿಗೆ ಮನೆಯ ಪ್ರತ್ಯೇಕತೆ / ಮನೆಯ ಆರೈಕೆ ಕ್ರಮವನ್ನು ಅನುಸರಿಸಲು ಸೂಚಿಸಲಾಗಿರುತ್ತದೆ. ಹಾಗೂ ಸಕಾರಾತ್ಮಕ ಪರೀಕ್ಷೆಯ ದಿನಾಂಕದಿಂದ 10 ದಿನಗಳವರೆಗೆ ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಕೋವಿಡ್ ಕೇರ್ ಸೆಂಟರ್/ಹೋಂ ಐಸೋಲೇಷನ್ ಮತ್ತು ಮುಂದಿನ 7 ದಿನಗಳವರೆಗೆ ಅವರ ಆರೋಗ್ಯವನ್ನು ಮನೆಯಲ್ಲಿ ಸ್ವಯಂ-ಮೇಲ್ವಿಚಾರಣೆ ಮಾಡಲು ಸೂಚಿಸಲಾಗಿರುತ್ತದೆ.

ಅದರಂತೆ, ರೋಗಲಕ್ಷಣರಹಿತ ಸೋಂಕಿತ ವಿದ್ಯಾರ್ಥಿಗಳಿಗೆ 17 ದಿನಗಳ ನಂತರ ಪುನರಾವರ್ತಿತ COVID-19 ಪರೀಕ್ಷೆಯ ಅಗತ್ಯವಿಲ್ಲ. 17 ದಿನಗಳ ಅವಧಿಯ ಕೊನೆಯಲ್ಲಿ ಚಿಕಿತ್ಸೆ ನೀಡುವ ವೈದ್ಯ / ವೈದ್ಯಕೀಯ ಅಧಿಕಾರಿಯಿಂದ ಫಿಟ್‌ನೆಸ್ ಪ್ರಮಾಣಪತ್ರವನ್ನು ಪಡೆದು ಕಾಲೇಜಿಗೆ ಸಲ್ಲಿಸಬಹುದು. ವೈದ್ಯಕೀಯ ಪ್ರಮಾಣಪತ್ರವನ್ನು ನೀಡಿದ ವಿದ್ಯಾರ್ಥಿಗಳಿಗೆ ಮತ್ತೆ ತರಗತಿಗಳಿಗೆ ಸೇರಲು ಅವಕಾಶ ನೀಡುವಂತೆ ತಕ್ಷಣವೇ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಆಯುಕ್ತರು
ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಇಲಾಖೆ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು
3. ಜಿಲ್ಲಾ ಆಕುಕ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು – ಆಕುಕ ಇಲಾಖೆ, ಕರ್ನಾಟಕ
2. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ